
# ಸಂಪತ್ತಿಗೇ ಸವಾಲ್!



ಇಲಸ್ಟ್ರೇಷನ್: ಗಣೇಶ್

**ಆದಾಯ ಹೆಚ್ಚಾದಂತೆ, ಅದಕ್ಕೆ ಅನುಗುಣವಾಗಿ ಮನುಷ್ಯನ ಸಂತೋಷ ಹೆಚ್ಚಾಗುತ್ತದೆಯೇ?**

■ ಪ್ರಕಾಶ ನಡಹಳ್ಳಿ

‘ಒಂದು ಕುಟುಂಬ, ಒಂದು ಮನೆ’ ಅನ್ನುವ ಕಾಲ ಇತ್ತು. ಈಗ ಒಂದು ಮನೆ ನಮ್ಮ ವಸತಿಗೆ, ಇನ್ನೊಂದು ಮನೆ ಬಾಡಿಗೆಗೆ, ಮತ್ತೊಂದೂರಿನಲ್ಲಿ ಸೈಟೊಂದು ಬೇಕು. ನಮ್ಮ ಮನೆಯಲ್ಲೊಂದು ಕಾರಿದ್ದರೆ, ಪಕ್ಕದ ಮನೆಯ ಕಾಂಪೌಂಡಿನಲ್ಲಿ ಎರಡು ಕಾರುಗಳು ಇರುತ್ತವೆ. ಕೆಲವರು ವರ್ಷಕ್ಕೊಮ್ಮೆ ಕಾರನ್ನು ಬದಲಾಯಿಸಿದರೆ ಮತ್ತೆ ಕೆಲವರು ಹೊಸ ಮಾದರಿ ಬಂದಾಗಲೆಲ್ಲಾ ಕಾರನ್ನು ಬದಲಾಯಿಸುತ್ತಾರೆ. ಹೊಸ ಮಾದರಿಯ ಮೊಬೈಲ್ ಫೋನ್ ಮಾರುಕಟ್ಟೆಯ ಪ್ರವೇಶಿಸಿದ ದಿನವೇ, ಮಧ್ಯರಾತ್ರಿವರೆಗೆ ಕಾದು ಕುಳಿತು, ಮೊಬೈಲ್ ಸೆಟ್ ಖರೀದಿಸುತ್ತೇವೆ. ಆಸ್ತಿ ಸಂಪಾದನೆ ಹಾಗೂ ಕೊಳ್ಳುಬಾಕತನದ ಕುದುರೆಯನ್ನೇರಿ, ನಾವು ಸುಖವನ್ನು ಅರಸುತ್ತಿದ್ದೇವೆ. ಆದರೆ ಅಲ್ಲಿ ಕಾಣುವುದು ಮರೀಚಿಕೆ ಎನ್ನುವುದು ನಮಗೆ ಗೊತ್ತಾಗುತ್ತಲೇ ಇಲ್ಲ!

ಆದಾಯ ಹೆಚ್ಚಾದಂತೆ, ಅದಕ್ಕೆ ಅನುಗುಣವಾಗಿ ಸಂತೋಷ ಹೆಚ್ಚಾಗುತ್ತದೆಯೇ? ಖಂಡಿತಾ ಇಲ್ಲ. ಬದಲಾಗಿ ಹೊಸ ಹೊಸ ಚಿಂತೆಗಳು ಹಿಂಬಾಲಿಸುತ್ತವೆ. ಗಳಿಸಿದ ಹಣದ ರಕ್ಷಣೆ ಇನ್ನೊಂದು ಸವಾಲೇ ಸರಿ. ಹಲವಾರು ಬ್ಯಾಂಕ್, ಮ್ಯೂಚುಯೆಲ್ ಫಂಡ್, ಕಂಪೆನಿಯ ಷೇರು, ಇವುಗಳಲ್ಲಿ ಹಣ ಕೂಡಿಡುತ್ತೇವೆ. ಅವು ಸಕಾಲಕ್ಕೆ ಕೈಗೆ ಸಿಗುವುದೋ ಇಲ್ಲವೋ ಎಂಬ ಆತಂಕ ಒಳಗೆ ಇದ್ದೇ ಇರುತ್ತದೆ. ಆದಾಯ ಅಧಿಕವಾದಂತೆ ತೆರಿಗೆ ಹೆಚ್ಚು. ತೆರಿಗೆ ಕೊಡುವಾಗ ಸಂಕಟ. ಆದರೂ ಹಣದ ಹಿಂದೆಯೇ ಓಡುತ್ತಿದ್ದೇವೆ. ಹಣಕ್ಕಾಗಿ ಬದುಕೇ, ಬದುಕಿಗಾಗಿ ಹಣವೇ ಅನ್ನುವುದೂ ಗೊತ್ತಾಗುತ್ತಿಲ್ಲ.

ನೋಬೆಲ್ ವಿಜೇತ ಅರ್ಥಶಾಸ್ತ್ರಜ್ಞ ಹಾಗೂ ಮನಃಶ್ಶಾಸ್ತ್ರಜ್ಞರೂ ಆಗಿರುವ ಡೇನಿಯಲ್ ಕಾಹ್ನೆಮನ್ ಅವರು ಇದಕ್ಕೆ ಕೊಡುವ ಉತ್ತರ– ‘ಹೆಚ್ಚು ಸಂಪತ್ತನ್ನು ಗಳಿಸಿದವರು ತುಂಬಾ ಸಂತೋಷದಲ್ಲಿರುವುದಿಲ್ಲ. ಏಕೆಂದರೆ ಹೆಚ್ಚಿನ ಆದಾಯವಿದ್ದವರು ತಮ್ಮ ನಿರೀಕ್ಷೆಯ ಮಟ್ಟವನ್ನು ಏರಿಸಿಕೊಳ್ಳುತ್ತಿರುತ್ತಾರೆ. ಇನ್ನೂ ಹೆಚ್ಚಿನ ಸುಖ ವೈಭೋಗಕ್ಕೆ ಏಣಿ ಹಾಕುತ್ತಾರೆ.’ ಡೇನಿಯಲ್ ಅವರು, ಹಣ ಸಂಪಾದನೆಯೇ ಜೀವನದ ಗುರಿ ಅನ್ನುವವರನ್ನು ವಿಲಾಸದ ಗಾಣದ ಎತ್ತಿಗೆ ಹೋಲಿಸುತ್ತಾರೆ.

ಕಾಹ್ನೆಮನ್ ಅವರು ಜನರು ಖುಷಿಯಾಗಿರುವುದರ ಕುರಿತು ಒಂದು ಸಮೀಕ್ಷೆ ನಡೆಸಿದರು. ಸಮೀಕ್ಷೆಯು ಅಮೆರಿಕದ ಒಂದು ಸಾವಿರ ಮಹಿಳೆಯರನ್ನು ಒಳಗೊಂಡಿತ್ತು. ಆ ಸಮೀಕ್ಷೆ, ಮಹಿಳೆಯರ ದಿನದ ಅನುಭವಗಳ ಕುರಿತಾಗಿತ್ತು. ಸಮೀಕ್ಷೆಯಲ್ಲಿ ಹೊರಹೊಮ್ಮಿದ ಮುಖ್ಯಾಂಶಗಳೇನೆಂದರೆ, ಇಷ್ಟಪಟ್ಟವರ ಜೊತೆ ಸಮಯವನ್ನು ಹಂಚಿಕೊಳ್ಳುವುದು ಹಾಗೂ ಪ್ರೀತಿಯಿಂದಿರುವುದು, ಇವುಗಳಿಂದ ಖುಷಿ ಸಿಗುತ್ತದೆ. ಆದಾಯ, ಕೆಲಸದ ಒತ್ತಡ ಅಥವಾ ವೈವಾಹಿಕ ಸ್ಥಿತಿಗತಿಗಳ ವಿಚಾರ ಅಲ್ಲಿ ಗೌಣವಾಗಿತ್ತು. ಅವರಿಗೆ ಖುಷಿ ಕೊಡುವ ವ್ಯಕ್ತಿಗಳ ಅವರೋಹಣಾ ಪಟ್ಟಿ ಹೀಗಿತ್ತು: ಮೊದಲಿಗೆ ಸ್ನೇಹಿತರು, ನಂತರ ಸಂಬಂಧಿಕರು, ಪತಿ–ಪತ್ನಿ, ಮಕ್ಕಳು, ಗ್ರಾಹಕರು, ಸಹೋದ್ಯೋಗಿಗಳು, ಬಾಸ್ ಮತ್ತು ಕಡೆಯದಾಗಿ